# ಏಜಾಕ್ಸ್ ಮತ್ತು ಅಶ್ವತ್ಥಾಮನ್ ನಾಟಕಗಳ ತೌಲನಿಕ ಓದು.

**ಧನಲಕ್ಷ್ಮಿ ಸಿ.**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ನೆಲಮಂಗಲ
ಬೆಂಗಳೂರು ಗ್ರಾಮಾಂತರ-562123.

**Article Link: https://aksharasurya.com/2023/08/dhanalakshmi-c/**

**ABSTRACT:**
ಭಾರತದಲ್ಲಿ ಪುರಾಣ ಪ್ರಸಿದ್ಧವಾದ ಅನೇಕ ಕಥೆಗಳಿರುವಂತೆಯೇ ಗ್ರೀಸ್ ದೇಶದಲ್ಲೂ ಪುರಾಣ ಪ್ರಸಿದ್ಧ ಕಥೆಗಳಿವೆ. ಹಲವಾರು ಗ್ರೀಕ್ ನಾಟಕಗಳ ಕಥಾವಸ್ತು ಪುರಾಣ ಪುರುಷರನ್ನು ಕುರಿತದ್ದೆ ಆಗಿದೆ. ಅಂತಹ ನಾಟಕಗಳಲ್ಲಿ ಸಾಫೋಕ್ಲಿಸ್ ಮಹಾಕವಿಯ ಏಜಾಕ್ಸ್ ನಾಟಕವೂ ಒಂದು. ಇದೊಂದು ದುರಂತ ನಾಟಕ. ಈ ನಾಟಕವನ್ನು ಓದಿ ಪ್ರಭಾವಗೊಂಡ ಬಿ.ಎಂ.ಶ್ರೀ ಅವರು ಮಹಾಭಾರತದ ಗದಾಸೌಪ್ತಿಕ ಪರ್ವದಲ್ಲಿ ಬರುವ ಅಶ್ವತ್ಥಾಮನ ಪ್ರಸಂಗವನ್ನು ಆಧರಿಸಿ ಅಶ್ವತ್ಥಾಮನ್ ನಾಟಕವನ್ನು ರಚಿಸಿದ್ದಾರೆ. ಬಿ.ಎಂ.ಶ್ರೀ ಅವರು ಪಾಶ್ಚಾತ್ಯ ನಾಟಕ ಒಂದನ್ನು ಯಥಾವತ್ತಾಗಿ ಕನ್ನಡಕ್ಕೆ ತರದೆ ಅದರ ಪ್ರಭಾವದಿಂದ ಸ್ವತಂತ್ರ ಭಾರತೀಯ ನಾಟಕವನ್ನು ರಚಿಸಿದ್ದಾರೆ. ಈ ಮೂಲಕ ಕನ್ನಡ ಸಾಹಿತ್ಯಕ್ಕೆ ಅವರು ದುರಂತ ನಾಟಕವನ್ನು ಪರಿಚಯಿಸಿದರು.

**KEYWORDS:** ಸ್ವಾಭಿಮಾನ, ಸ್ವಾಮಿ ಭಕ್ತಿ, ಅವಮಾನ, ಆತ್ಮ ವೈಭವ, ಆತ್ಮ ಮರುಕ.

ತೌಲನಿಕ ಸಾಹಿತ್ಯದ ಪರಿಕಲ್ಪನೆಯ ಬಿತ್ತಿ ವಿಶಾಲವಾದದು. ದೇಶ ಕಾಲಗಳ ವ್ಯತ್ಯಾಸವನ್ನು ಮೀರಿ ಎಲ್ಲಾ ಮನುಷ್ಯರ ಮೂಲಭೂತ ಅನುಭವ ಒಂದೇ, ರಾಗ-ದ್ವೇಷಗಳು, ಆಸೆ-ಆಕಾಂಕ್ಷೆಗಳು ಒಂದೇ ಎಂಬ ಸಮಾನತೆಯನ್ನು ಇದು ಮೂಡಿಸುತ್ತದೆ. ಬಿಡಿಬಿಡಿಯಾಗಿ ಕಾಣುವ ಬೇರೆಬೇರೆ ಯುಗಗಳ ಮತ್ತು ಸಂಸ್ಕೃತಿಗಳ ಆಳದಲ್ಲಿರುವ ಏಕತೆಯನ್ನು ಗುರುತಿಸುವುದು ತೌಲನಿಕ ಸಾಹಿತ್ಯದಿಂದ ಸಾಧ್ಯವಾಗುತ್ತದೆ. ಭಾಷೆ, ಕುಲ, ಧರ್ಮ, ಸಂಸ್ಕೃತಿ ಇವುಗಳಿಂದಾಗಿ ಒಡೆದು ಹೋಗಿರುವ ಮಾನವ ಜಾತಿಯ ಏಕತೆಯನ್ನು ಪ್ರತಿಷ್ಠಾಪಿಸುವುದು, ಯಾವ ಕಾಲದಲ್ಲಿ, ಯಾವ ಭೌಗೋಳಿಕ ಪ್ರದೇಶದಲ್ಲಿ, ಯಾವ ಭಾಷೆಯಲ್ಲಿಯೇ

ಅಭಿವ್ಯಕ್ತಗೊಂಡಿದ್ದರೂ ಮಾನವನ ಮೂಲಭೂತ ಅನುಭವಗಳು, ಸಮಸ್ಯೆಗಳು, ತೊಡಕುಗಳು, ಆಸೆ–ಆಕಾಂಕ್ಷೆಗಳು ಒಂದೇ ಆಗಿಲ್ಲದಿದ್ದರೂ ಸಮಾನವಾಗಿರುತ್ತದೆ ಹಾಗೂ ಇಂತಹ ಸಮಾನತೆಯನ್ನು ನಾವು ಸಾಹಿತ್ಯದ ತೌಲನಿಕ ಅಧ್ಯಯನದಿಂದ ಗುರುತಿಸಬಹುದು. ಹಾಗಾಗಿ "ತೌಲನಿಕ ಸಾಹಿತ್ಯದ ಅಧ್ಯಯನವೆಂದರೆ ಎಲ್ಲಾ ಸಾಹಿತ್ಯಿಕ ಸೃಷ್ಟಿಯೂ ಮತ್ತು ಸಾಹಿತ್ಯಾನುಭವವೂ ಸಮಾನವಾಗಿರುತ್ತದೆ ಎಂಬ ಅರಿವಿನಿಂದ ಮಾಡುವ ಅಧ್ಯಯನ" ಎಂಬ ರೆನೆವೆಲಕ್‌ನ ಮಾತು ಮುಖ್ಯವಾಗುತ್ತದೆ.

ಸಾಮಾನ್ಯವಾಗಿ ಎರಡು ಕೃತಿಗಳನ್ನು ಹೋಲಿಸಿ ಅವುಗಳ ಮೌಲ್ಯಮಾಪನ ಮಾಡುವುದು ತೌಲನಿಕ ಸಾಹಿತ್ಯದ ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ಒಂದೇ ಭಾಷೆಯ ಭಿನ್ನ ಲೇಖಕರ ಕೃತಿಗಳು, ಬೇರೆ ಬೇರೆ ಭಾಷೆಯ ಕೃತಿಗಳು, ಬೇರೆ ಬೇರೆ ದೇಶಗಳಿಗೆ ಸೇರಿದ ಕೃತಿಗಳನ್ನು ಪರಸ್ಪರ ಹೋಲಿಸಿ ನೋಡುವ, ಆ ಮೂಲಕ ಆ ಕೃತಿಗಳ ತುಲನೆ ಮಾಡುವ ಕಾರ್ಯ ನಡೆಯುತ್ತದೆ. ಅಂದರೆ ತೌಲನಿಕ ಸಾಹಿತ್ಯ ಎನ್ನುವುದು ಭಿನ್ನ ಸಂಸ್ಕೃತಿಗಳಿಗೆ ಸೇರಿದ ಪಠ್ಯಗಳ ಅಧ್ಯಯನ ಹಾಗೆಯೇ ಇದೊಂದು ಅಂತರ್ ಶಿಸ್ತಿಯ ಅಧ್ಯಯನ ಮತ್ತು ಭಿನ್ನ ಸಾಹಿತ್ಯ ಕೃತಿಗಳಲ್ಲಿ ಇರಬಹುದಾದ ಕಾಲ–ದೇಶಗಳ ಆಚೆಗಿನ ಸಂಬಂಧವನ್ನು ಕುರಿತ ಅಧ್ಯಯನ ಕೂಡ ಆಗಿದೆ. ಹೀಗೆ ಎರಡು ಕೃತಿಗಳನ್ನು ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸುವಾಗ ಪೂರ್ವಗ್ರಹಗಳಿಂದ ಮುಕ್ತವಾದ ಒಂದು ವಿಶಾಲವಾದ ದೃಷ್ಟಿಕೋನದ ಅಗತ್ಯವಿದೆ. ಎರಡೂ ಕೃತಿಗಳ ಹಿನ್ನೆಲೆ, ಪರಿಸರ, ಸಂದರ್ಭ, ಪ್ರಭಾವ, ಅನುಕರಣೆ, ಸ್ವೀಕಾರ ಇವುಗಳನ್ನು ಅಧ್ಯಯನ ಮಾಡಬೇಕಾದ ಅಗತ್ಯವಿರುತ್ತದೆ.

ಸುಜನಾ ಅವರು ಕನ್ನಡಕ್ಕೆ ಅನುವಾದ ಮಾಡಿರುವ ಸಾಫೋಕ್ಲಿಸ್ ಮಹಾಕವಿಯ ಗ್ರೀಕ್ ದುರಂತ ನಾಟಕ ಏಜಾಕ್ಸ್ ಮತ್ತು ಬಿ.ಎಂ. ಶ್ರೀಕಂಠಯ್ಯ ಅವರು ಬರೆದಿರುವ ಅಶ್ವತ್ಥಾಮನ್ ನಾಟಕವನ್ನು ತೌಲನಿಕ ಓದಿಗೆ ಒಳಪಡಿಸುವ ಪ್ರಯತ್ನ ಇಲ್ಲಿದೆ. "ಶ್ರೀ ಅವರ ಅಶ್ವತ್ಥಾಮನ್ ನಾಟಕವನ್ನು ಓದುವ ಸಾಮಾನ್ಯ ಸಹೃದಯನಿಗೂ ಗ್ರೀಕ್ ಮಹಾಕವಿ ಸಾಫೋಕ್ಲಿಸ್‌ನ ಏಜಾಕ್ಸ್ ನಾಟಕದ ಹೆಸರು ಹೆಸರಾಗಿ ಮಾತ್ರವಾದರೂ ಕಿವಿಗೆ ಬಿದ್ದಿರುವುದು ಸಾಧ್ಯ, ಗಂಭೀರ ವಿದ್ಯಾರ್ಥಿಯಾದವನಂತು ಆ ಎರಡೂ ನಾಟಕಗಳನ್ನು ತೌಲನಿಕವಾಗಿ ನೋಡಿ ಒರೆಹಚ್ಚುವ ಕೆಚ್ಚನ್ನು ತೋರಬಹುದು; ತೋರಬೇಕು." ಎಂದು ಸುಜನಾ ಅವರು ಹೇಳುತ್ತಾರೆ.

ಭಾರತದಲ್ಲಿ ಪುರಾಣ ಪ್ರಸಿದ್ಧವಾದ ಅನೇಕ ಕಥೆಗಳಿರುವಂತೆಯೇ ಗ್ರೀಸ್ ದೇಶದಲ್ಲೂ ಪುರಾಣ ಪ್ರಸಿದ್ಧ ಕಥೆಗಳಿವೆ. ಹಲವಾರು ಗ್ರೀಕ್ ನಾಟಕಗಳ

ಕಥಾವಸ್ತು ಪುರಾಣ ಪುರುಷರನ್ನು ಕುರಿತದ್ದೆ ಆಗಿದೆ. ಅಂತಹ ನಾಟಕಗಳಲ್ಲಿ ಸಾಫೋಕ್ಲಿಸ್ ಮಹಾಕವಿಯ ಏಜಾಕ್ಸ್ ನಾಟಕವೂ ಒಂದು. ಇದೊಂದು ದುರಂತ ನಾಟಕ. ಈ ನಾಟಕವನ್ನು ಓದಿ ಪ್ರಭಾವಗೊಂಡ ಬಿ.ಎಂ.ಶ್ರೀ ಅವರು ಮಹಾಭಾರತದ ಗದಾಸೌಪ್ತಿಕ ಪರ್ವದಲ್ಲಿ ಬರುವ ಅಶ್ವತ್ಥಾಮನ ಪ್ರಸಂಗವನ್ನು ಆಧರಿಸಿ ಅಶ್ವತ್ಥಾಮನ್ ನಾಟಕವನ್ನು ರಚಿಸಿದ್ದಾರೆ. ಬಿ.ಎಂ.ಶ್ರೀ ಅವರು ಪಾಶ್ಚಾತ್ಯ ನಾಟಕ ಒಂದನ್ನು ಯಥಾವತ್ತಾಗಿ ಕನ್ನಡಕ್ಕೆ ತರದೆ ಅದರ ಪ್ರಭಾವದಿಂದ ಸ್ವತಂತ್ರ ಭಾರತೀಯ ನಾಟಕವನ್ನು ರಚಿಸಿದ್ದಾರೆ. ಈ ಮೂಲಕ ಕನ್ನಡ ಸಾಹಿತ್ಯಕ್ಕೆ ಅವರು ದುರಂತ ನಾಟಕವನ್ನು ಪರಿಚಯಿಸಿದರು.

ಏಜಾಕ್ಸ್ ಮತ್ತು ಅಶ್ವತ್ಥಾಮನ್ ಎರಡೂ ಕೃತಿಗಳು ಮಹಾಕಾವ್ಯದಿಂದ ವಸ್ತುವನ್ನು ಸ್ವೀಕರಿಸಿರುವ ಕೃತಿಗಳು. ಏಜಾಕ್ಸ್ ನಾಟಕದ ವಸ್ತುವನ್ನು ಹೋಮರ್ ನ 'ಇಲಿಯಡ್' ಕಾವ್ಯದಿಂದ ಹಾಗೂ ಅಶ್ವತ್ಥಾಮನ್ ನಾಟಕದ ವಸ್ತುವನ್ನು 'ಮಹಾಭಾರತ'ದಿಂದ ತೆಗೆದುಕೊಂಡು ಸಾಫೋಕ್ಲಿಸ್ ಹಾಗೂ ಬಿ.ಎಂ.ಶ್ರೀ ಇಬ್ಬರೂ ತಮ್ಮದೇ ಆದ ಶೈಲಿಯಲ್ಲಿ ಹೊಸ ದೃಷ್ಟಿಕೋನಗಳೊಂದಿಗೆ ಈ ಎರಡು ನಾಟಕಗಳನ್ನೂ ರಚಿಸಿದ್ದಾರೆ. ಅಶ್ವತ್ಥಾಮನ್ ನಾಟಕದ ರಚನೆಯಲ್ಲಿ ಶ್ರೀ ಅವರು ಏಜಾಕ್ಸ್ ನಾಟಕವನ್ನು ಸ್ವೀಕರಿಸಿದ್ದಾರೆ. ಗ್ರೀಕ್ ನಾಟಕದ ಕಥೆಯ ಓಟ, ಕ್ರಮ, ಅಚ್ಚು ಇವು ಕನ್ನಡ ಸಂಸ್ಕೃತಿಗೆ ತಕ್ಕಂತೆ ಸೃಜನಶೀಲತೆಯ ಅಂಶಗಳೊಂದಿಗೆ ಈ ನಾಟಕ ರಚನೆಯಾಗಿದೆ.

ಏಜಾಕ್ಸ್ ಹಾಗೂ ಅಶ್ವತ್ಥಾಮನ್ ನಾಟಕಗಳ ಪಾತ್ರಗಳನ್ನು ಪರಿಚಯ ಮಾಡಿಕೊಳ್ಳುವುದಾದರೆ, ಏಜಾಕ್ಸ್ ಮತ್ತು ಅಶ್ವತ್ಥಾಮನ್ ನಾಯಕರು, ಏಜಾಕ್ಸ್ ನಾಟಕದಲ್ಲಿ ಅಥೆನಾ ದೇವತೆ, ಅಶ್ವತ್ಥಾಮನ್ ನಾಟಕದಲ್ಲಿ ರುದ್ರನು ದೇವಾ. ಏಜಾಕ್ಸ್‌ನ ಹೆಂಡತಿ ಟೆಕ್ಮೆಸ್ಸಾ, ಮಹಾಭಾರತದ ಅಶ್ವತ್ಥಾಮನ್ ಬ್ರಹ್ಮಚಾರಿ ಹಾಗಾಗಿ ನಾಟಕದಲ್ಲಿ ಅಶ್ವತ್ಥಾಮನ ಅಜ್ಜಿ ಭಾರ್ಗವಿ ಇದ್ದಾಳೆ. ಯೂರಿಸಾಕಿಸ್–ರುದ್ರ ಶಕ್ತಿ, ಮಲ ತಮ್ಮ ಟ್ಯೂಸರ್–ಗೆಳೆಯ ಏಕಲವ್ಯ, ಮೆನೆಲಾಸ್ ಮತ್ತು ಅಗಮೆಮ್ನನ್ ಇಬ್ಬರ ಸ್ಥಾನದಲ್ಲಿ ಭೀಮನೊಬ್ಬನೇ ಚಿತ್ರತನಾಗಿದ್ದಾನೆ.

ಏಜಾಕ್ಸ್ ಸಲಾಮಿಸ್ ಪ್ರಾಂತದಿಂದ ಟ್ರೋಜನ್ ಯುದ್ಧಕ್ಕೆ ಹನ್ನೆರಡು ಹಡಗುಗಳನ್ನು ತೆಗೆದುಕೊಂಡು ತನ್ನ ಅನುಯಾಯಿಗಳೊಂದಿಗೆ ಗ್ರೀಕರ ಯುದ್ಧಕಾರ್ಯಕ್ಕೆ ನೆರವಾದ, ಅವರ ಎಡಚೂಣಿಯಲ್ಲಿ ಕಾದಿದ ಮಹಾವೀರ. ರಾಜರ ನಡುವೆ ಒಡಂಬಡಿಕೆಯಾಗಿದ್ದಂತೆ ಸ್ವತಂತ್ರವಾಗಿ ಬಂದವನು. ಅಶ್ವತ್ಥಾಮ ಕೌರವರ ಕಡೆ ಮಹಾಭಾರತದ ಯುದ್ಧದಲ್ಲಿ ಕಾದಿದ ದ್ರೋಣ ಪುತ್ರ,

ಆಚಾರ್ಯ ಸುತ, ದುರ್ಯೋಧನನ ಗೆಳೆಯ. ಏಜಾಕ್ಸ್‌ಗೆ ತಂದೆ, ತಾಯಿ ಇನ್ನೂ ಬದುಕಿರುವರೆಂಬ ವಿಷಯ ತಿಳಿದು ಬರುತ್ತದೆ, ಹಿಂದಿನ ಒಂದು ವಿಜಯದ ಸಂದರ್ಭದಲ್ಲಿ ಬಹುಮಾನವಾಗಿ ದೊರೆತ ರಾಜ ಪುತ್ರಿ ಟೆಕ್ಮೆಸ್ಸಾ ಈ ನಾಟಕದಲ್ಲಿ ಏಜಾಕ್ಸನ ಹೆಂಡತಿಯಾಗಿದ್ದಾಳೆ. ಇವರಿಬ್ಬರ ಮಗನಾಗಿ ಯೂರಿಸಾಕಿಸ್ ಇದ್ದಾನೆ. ಅಶ್ವತ್ಥಾಮನ ವಿಷಯವನ್ನು ನೋಡಿದರೆ ಆತನ ತಾಯಿಯ ವಿಷಯವೇ ಇಲ್ಲ. ಅಶ್ವತ್ಥಾಮ ಬ್ರಹ್ಮಚಾರಿ ಹೀಗಾಗಿ ಮಡದಿ, ಮಕ್ಕಳ ವಿಷಯ ಪ್ರಸ್ತಾಪಿಸುವುದು ಸಾಧ್ಯವೇ ಇಲ್ಲ. ಆದ್ದರಿಂದಲೇ ಇಲ್ಲಿ ಅಶ್ವತ್ಥಾಮನ್‌ನ ಅಜ್ಜಿ ಭಾರ್ಗವಿ ಇದ್ದಾಳೆ. ಏಜಾಕ್ಸ್‌ನ ತಂದೆ ಟೆಲಮಾನ್ ಪ್ರಸಿದ್ಧನಾದ ವೀರ. ಗ್ರೀಕ್ ವೀರರಲ್ಲಿ ಸುಪ್ರಸಿದ್ಧನಾದ ಹೆರಾಕ್ಲಿಸ್ ದೇವತೆಗೆ ಸರಿಸಮಾನನಾದವನು. ಅಶ್ವತ್ಥಾಮನ್‌ನ ತಂದೆ ಕುರು ಕುಲದ ಗುರುವಾದ ದ್ರೋಣಾಚಾರ್ಯ. ಅಶ್ವತ್ಥಾಮನ್ ನಾಟಕದಲ್ಲಿ ಬರುವ ಏಕಲವ್ಯ ಆತನ ಸ್ನೇಹಿತನಾಗಿದ್ದಾನೆ. ಏಕಲವ್ಯ ಒಬ್ಬ ನಿಶಾದರ ಒಡೆಯನ ಮಗ.

ಗ್ರೀಕ್ ಆವರಣದಲ್ಲಿ ಸಲಾಮಿಸ್ ಪ್ರಾಂತ್ಯಕ್ಕೆ ಯಾವ ಗೌರವ ಮತ್ತು ಸ್ವಾತಂತ್ರ್ಯದ ಸವಿನೆನಪು ಇದೆಯೋ ಅಶ್ವತ್ಥಾಮನ್ ನಾಟಕದಲ್ಲಿ ಇದೇ ಬಗೆಯ ಗೌರವ ಮತ್ತು ಸ್ವಾತಂತ್ರ್ಯಗಳ ಸವಿ ನೆನಪು ಕನ್ನಡ ನಾಡಿನ ಬನವಾಸಿಗೂ ಕನ್ನಡದ ಕರುನಾಡಿಗೂ ಇರುವುದು ಕಂಡು ಬರುತ್ತದೆ. ಇಲ್ಲಿ ಬಿ.ಎಂ.ಶ್ರೀ ಅವರು ಓದುಗರಿಗೆ ಬೇಡರನ್ನು ಬನವಾಸಿಯ ಕಡೆಯವರೆಂದು ಪರಿಚಯಿಸಿದ್ದಾರೆ.

ದುರಂತ ನಾಟಕದ ಪರಿಕಲ್ಪನೆ ಗ್ರೀಕರಿಂದ ಸೃಷ್ಟಿಸಲ್ಪಟ್ಟದ್ದು ಎಂಬುದರಲ್ಲಿ ಎರಡು ಮಾತಿಲ್ಲ ಹೀಗಾಗಿಯೇ ಅಶ್ವತ್ಥಾಮನ್ ನಾಟಕದಲ್ಲಿ ಅವನ ಪತನವಾಗುವುದು ವಿಧಿಯ ಕೈವಾಡ ಮತ್ತು ಸ್ವಂತ ದೌರ್ಬಲ್ಯದಿಂದ. ಏಜಾಕ್ಸ್‌ನ ಸ್ಥಿತಿಯೂ ಇದೇ ಆಗಿದೆ. ಈ ಎರಡು ನಾಟಕಗಳಲ್ಲಿಯೂ "ಯಾತನೆಯ ಮೂಲಕ ಕಲಿಕೆ" ಇದು ಕೇಂದ್ರ ಪಾತ್ರದ ಚಿತ್ರದಲ್ಲಿ ಅಡಗಿದೆ. ಗ್ರೀಕ್ ದುರಂತ ನಾಟಕದಲ್ಲಿ ಕಾಣುವ ಏಜಾಕ್ಸ್‌ನ ಪಾತ್ರದ ಮನೋವಿಶ್ಲೇಷಣೆಯನ್ನು ಅಶ್ವತ್ಥಾಮನ್‌ನಲ್ಲಿಯೂ ಕಾಣಬಹುದಾಗಿದೆ.

ಒಡೆಯ ಮತ್ತು ಸ್ನೇಹಿತನಾದ ದುರ್ಯೋಧನನ ದುಃಖ ಸ್ಥಿತಿಯನ್ನು ಕಂಡು ಅಶ್ವತ್ಥಾಮ ಪಾಂಡವರ ಬಗ್ಗೆ ಕ್ರೋದವನ್ನು ವ್ಯಕ್ತಪಡಿಸಿ, ಎಲ್ಲರೂ ಮಲಗಿರುವಾಗ ರಾತ್ರಿಯ ಕತ್ತಲಲ್ಲಿ ಪಾಂಡವರ ಶಿಬಿರದ ಮೇಲೆ ದಾಳಿ ಮಾಡಿ ಕೈಗೆ ಸಿಕ್ಕವರನ್ನು ಕೊಂದು, ಪಾಂಡವರೆಂದು ಭ್ರಮಿಸಿ ಇರುಳಿನಲ್ಲಿ ಉಪ ಪಾಂಡವರ ತಲೆಗಳನ್ನು ಕತ್ತರಿಸುತ್ತಾನೆ ಹಾಗೂ ಅಸಂಖ್ಯಾತ ಪ್ರಾಣಿಗಳನ್ನು ಕೊಲ್ಲುತ್ತಾನೆ. ಆದರೆ ಕೆಲವೇ ಸಮಯದ ನಂತರ ಅಶ್ವತ್ಥಾಮನಿಗೆ ತನ್ನ ಕೃತ್ಯದ ಅರಿವಾಗುತ್ತದೆ. ಈ ನಾಟಕವನ್ನು ಒಮ್ಮೆ ವಿಶ್ಲೇಷಣಾತ್ಮಕವಾಗಿ ನೋಡಿದಾಗ ಶ್ರೀ ಅವರು ಸೃಜನಾತ್ಮಕ ರಹದಾ-

ರಿಯನ್ನು ಬಳಸಿಕೊಂಡಿದ್ದಾರೆ. ಇಲ್ಲಿ ಭಾರತೀಯ ಪೌರಾಣಿಕ ದರ್ಶನ ಹಾಗೂ ದೈವಿ ಸ್ವರ್ಗದಿಂದ ಮಾನವ ಪ್ರವೃತ್ತಿಗಳು ಕಂಡುಬರುತ್ತವೆ. ಆದರೆ ಗ್ರೀಕ್ ನಾಟಕ ಇದನ್ನು ಒಪ್ಪುವುದಿಲ್ಲ. ಆತ್ಮವಿಶ್ವಾಸದ ಗುಂಗಿನಲ್ಲಿ ಅತಿಯಾದ ಆತ್ಮಭಿಮಾನವು ಮುಚ್ಚಿಟ್ಟ ಕತ್ತಲ ಲೋಕದಂತೆ ಅಲ್ಲಿನ ದುರಂತ ಕಂಡುಬರುತ್ತದೆ.

ಏಜಾಕ್ಸ್ ನಾಟಕದ ಅಥೆನಾ ಪಾತ್ರ ಇಲ್ಲಿ ರುದ್ರನಿಗೆ ಹೋಲುತ್ತದೆ. ಅಶ್ವತ್ಥಾಮನ್ ರುದ್ರನ ಅನುಗ್ರಹವನ್ನು ಪಡೆಯಲು ಪ್ರಯತ್ನಿಸುತ್ತಾನೆ. ಅಶ್ವತ್ಥಾಮನು ನಡೆಸುವ ಭಕ್ತಿಗಿಂತ ಕೃಷ್ಣನ ವಿಶ್ವಾಸ ಮತ್ತು ವಿನಯಗಳ ವರ್ತನೆ ರುದ್ರನಿಗೆ ಹೆಚ್ಚು ತೃಪ್ತಿಕರವೆಂದು ತೋರುತ್ತದೆ. ಮಹಾಭಾರತದ ತುಂಬಾ ಅತಿಮಾನುಷ, ದೈವಿಕ ಪವಾಡಗಳನ್ನು ಸಾಧಿಸಿದವನು ಕೃಷ್ಣ. ಆದರೆ ಈ ನಾಟಕದಲ್ಲಿ ಮಾನವತೆ ಸಜ್ಜನಿಕೆಗಳಿಗೆ ಮನ್ನಣೆ ದೊರೆಯುತ್ತದೆ. ಕಥಾ ವಸ್ತುವಿನ ಬೆಳವಣಿಗೆಯಲ್ಲಿ ಕೃಷ್ಣನ ಪಾತ್ರ ಬಹು ವಿಶೇಷವಾದದ್ದು.

ಅಶ್ವತ್ಥಾಮನ ಉದ್ದೇಶ ಹೆಚ್ಚು ಘನವಾದದ್ದು. ಮೊದಲಿನಿಂದ ಒಡೆಯನ ಕ್ಷಾತ್ರದಲ್ಲಿ ತನ್ನ ಗೆಳೆಯನೂ ಆಗಿದ್ದ ದುರ್ಯೋಧನನಿಗೆ ತನ್ನ ಸೇವೆಯನ್ನು ಅರ್ಪಿಸಬೇಕೆಂದು ಅವನು ಬಯಸುತ್ತಾನೆ. ಆತನ ಕರುಣಾ ಜನಕ ಸ್ಥಿತಿಯನ್ನು ಕಂಡು ಪಾಂಡವರ ಶಿರಗಳನ್ನು ತಂದು ಒಪ್ಪಿಸುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಅಶ್ವತ್ಥಾಮನ ಪೋಷಕ ದೇವನಾದ ರುದ್ರನು ಮಬ್ಬು ಮಾಡಲು, ಅಶ್ವತ್ಥಾಮನ ಸಾಹಸ ಪಶುಗಳ, ಹೆಂಗಸರ, ಉಪಪಾಂಡವರ ಕೊಲೆಯಲ್ಲಿ ಪರ್ಯಾವಸಾನಗೊಳ್ಳುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಏಜಾಕ್ಸ್ ನಾಟಕದಲ್ಲಿ ಒಂದು ರೀತಿಯ ಸ್ವಾರ್ಥ, ಸ್ವಾಭಿಮಾನ ಆತನ ಕೃತ್ಯಕ್ಕೆ ಕಾರಣವಾದರೆ, ಅಶ್ವತ್ಥಾಮನ್ ನಾಟಕದಲ್ಲಿ ಸ್ವಾಮಿ ಭಕ್ತಿ ಹಾಗೂ ಮಿತ್ರ ಪ್ರೇಮ ಅವನ ಕೃತ್ಯಕ್ಕೆ ಕಾರಣವಾಗುತ್ತದೆ.

ಗ್ರೀಕ್ ರುದ್ರ ನಾಟಕಗಳಲ್ಲಿ ಮೇಳದ ಸ್ಥಾನ ಮಹತ್ವದ್ದು. ಆದರೆ ಕನ್ನಡ ನಾಟಕಗಳಲ್ಲಾಗಲಿ, ಸಂಸ್ಕೃತ ನಾಟಕಗಳನ್ನಾಗಲಿ ಮೇಳದ ಪರಿಚಯ ಅಥವಾ ಪ್ರಭಾವದ ಸುಳಿವು ಕಾಣುವುದಿಲ್ಲ. ಆದರೆ ಯಕ್ಷಗಾನ, ಬಯಲಾಟ ಮುಂತಾದ ಕಡೆ ಮೇಳ ಇರುವುದನ್ನು ಕಾಣಬಹುದು. ಈ ಎರಡೂ ದುರಂತ ನಾಟಕಗಳಲ್ಲಿ ಮೇಳ ನೇರವಾಗಿ ಸಂಬಂಧವನ್ನು ಹೊಂದಿದೆ. ಇಲ್ಲಿ ಮೇಳ ಹಿಂದೆ ನಡೆದದ್ದನ್ನು, ಮುಂದೆ ನಡೆಯುವುದನ್ನು ಕೊಂಡಿಯಂತೆ ಸೇರಿಸುವ ಕೆಲಸ ಮಾಡುತ್ತದೆ. ನಾಟಕದ ಆರಂಭದಿಂದ ಕೊನೆಯವರೆಗೂ ಮೇಳದವರು ಕಂಡು ಬರುತ್ತಾರೆ. ಅವರು ಎರಡೂ ನಾಟಕಗಳಲ್ಲಿ ಧರ್ಮದ ಸಂಕೇತದ ರೀತಿಯಲ್ಲಿ, ಜನಾಭಿಪ್ರಾಯದ ಪ್ರತಿನಿಧಿಗಳಂತೆ ವರ್ತಿಸುತ್ತಾರೆ.

ಅಶ್ವತ್ಥಾಮನ್ ತಾನು ಮಿತಿ ಅರಿತ ಮಾನವ, ವಿನಯಶೀಲ, ಧರ್ಮಿಷ್ಠ, ನ್ಯಾಯಶೀಲ ಆದುದರಿಂದ ರುದ್ರನ ಹೃದಯವನ್ನು, ಧರ್ಮದ ಸ್ವರೂಪವನ್ನು ಬಲ್ಲವನು. ಅಶ್ವತ್ಥಾಮನ್‌ಗಿಂತಲೂ ಜ್ಞಾನಿಯಾಗಲಿ, ಶೂರನಾಗಲಿ ಬೇರೆಯಾರೂ ಇಲ್ಲ ಎಂಬುದು ರುದ್ರ ಮತ್ತು ಕೃಷ್ಣ ಇಬ್ಬರಿಗೂ ತಿಳಿದಿದೆ. ಅದೇ ರೀತಿಯಾಗಿ ಅಥೆನಾ ಮತ್ತು ಒಡಿಸ್ಯೂಸ್‌ಗೆ ಏಜಾಕ್ಸ್‌ನು ವೀರಾಧಿವೀರ, ಶೂರಾಧಿಶೂರ, ವಿನಯವಂತ ಎಂಬುದು ತಿಳಿದಿದೆ.

ಏಜಾಕ್ಸ್ ನಾಟಕದಲ್ಲಿ ಅಥೆನಾ ದೇವಿಯ ಸಹಾಯದಿಂದ ಒಡಿಸ್ಯೂಸ್ ಏಜಾಕ್ಸ್‌ನ ಬಿಡಾರದ ಬಳಿ ಬರುತ್ತಾನೆ. ಆದರೆ ಅಲ್ಲಿ ಪಶುಗಳ ರಕ್ತದ ಮಗುವಿನಲ್ಲಿ ಕುಳಿತಿರುವ ಏಜಾಕ್ಸ್‌ನನ್ನು ಕಂಡು ಹೆದರುತ್ತಾನೆ. ಅಥೆನಾ ದೇವತೆ ಏಜಾಕ್ಸ್‌ನನ್ನು ಕುರಿತು ಅವನು ಒಡಿಸ್ಯೂಸನಿಗೆ ಕೊಡ ಬಯಸುವ ಶಿಕ್ಷೆಯ ಬಗ್ಗೆ ಕೇಳಿದಾಗ, ಏಜಾಕ್ಸ್‌ನು ಬಾಸುಂಡೆಯಿಂದ ಬೆನ್ನು ಹಸಿರು ಕಟ್ಟಿದ ಮೇಲೆ ಅವನು ಸಾಯುವುದು ಎಂದು ಹೇಳುತ್ತಾನೆ ಹಾಗೂ ತಾನು ಓಡಿಸ್ಯೂಸ್‌ನನ್ನು ಸೆರೆ ಹಿಡಿದಿರುವ ಭ್ರಮೆಯಲ್ಲಿರುತ್ತಾನೆ. ಆದರೆ ಅಶ್ವತ್ಥಾಮನ್ ನಾಟಕದಲ್ಲಿ ಕೃಷ್ಣನು ಕಂಡ ಕೊಲೆಗಡುಕತನ ಮತ್ತು ಘೋರದ ನಡುವೆ ಅಶ್ವತ್ಥಾಮನ್ ತನ್ನನ್ನು ತಾನೇ ಹಳಿದುಕೊಳ್ಳುತ್ತಾ ಕುಳಿತಿರುತ್ತಾನೆ. ಅಯ್ಯೋ, ಪಾಪಿ ಎಂದು ತನ್ನನ್ನು ತಾನೇ ತೆಗಳಿಕೊಳ್ಳುತ್ತಾನೆ.

ತಮ್ಮ ಕೃತ್ಯಕ್ಕೆ ತಾವೇ ಹೇಸಿ 'ನನ್ನನ್ನು ಕೊಲ್ಲಿರಿ' ಎಂದು ಬೇಡುವ ಎರಡೂ ಪಾತ್ರಗಳು ಕನಿಕರವನ್ನು ಹುಟ್ಟಿಸುತ್ತವೆ. ತಾನು ನಂಬಿದ ದೈವದ ಒಲವನ್ನು ಕಳೆದುಕೊಂಡು, ತಾನು ಬಗೆದುದೆಲ್ಲ ಭಂಗವಾಗಿ, ವೀರನಾದ ತಾನು ಮಾಡಿದ, ಮಾನವನು ಮಾಡಬಾರದ ಅಕೃತ್ಯದಿಂದ ತಾನು ಇನ್ನು ಬಾಳಲು ಅರ್ಹನಲ್ಲ ಮತ್ತು ತಾನು ಬದುಕುವುದು ಅಪಮಾನದ ಸಂಗತಿ ಎಂದು ಆಲೋಚಿಸಿ ಪಶ್ಚಾತ್ತಾಪದ ಉರಿಯಲ್ಲಿ ಬೇಯುವ ಏಜಾಕ್ಸ್‌ನ ಚಿತ್ರಣ ಮನ ಕಲಕುವಂಥದ್ದು.

ದುರಂತ ಪ್ರಜ್ಞೆಯ ಸ್ವರೂಪದಲ್ಲಿ ನೋಡುವುದಾದರೆ ಅಭಿಮಾನ ಮತ್ತು ಮೌನವೆಂಬ ವೀರಯುಗದ ಮೌಲ್ಯಗಳ ಬಂಧ ಮತ್ತು ಬಲಿ ಏಜಾಕ್ಸ್. ಇತರ ಪಾತ್ರಗಳು ಅವನನ್ನು ಕುರಿತು ಹೇಳುವುದು ಅಂಥವನನ್ನು ನಾವು ಎಂದೂ ಕಂಡಿಲ್ಲ ಎಂಬ ಉದಾತ್ತತೆಯ ಮಾತನ್ನು. ಆದರೆ, ಏಜಾಕ್ಸ್‌ನ ವಿಷಯದಲ್ಲಿ ಅವಮಾನದಿಂದ ಅವಮಾನ, ಪತನದಿಂದ ಪತನ ಮತ್ತು ನಿರ್ನಾಮದಿಂದ ನಿರ್ನಾಮವಾಗುತ್ತದೆ. ಅಶ್ವತ್ಥಾಮನ್‌ನ ವಿಷಯದಲ್ಲಿ ಸ್ವಾಮಿನಿಷ್ಠೆಗೆ ಅವಮಾನವಾಗುತ್ತದೆ. ಆದರೆ ಎರಡೂ ಪ್ರಧಾನ ಪಾತ್ರಗಳು ನಾಟಕದಲ್ಲಿ 'ಆತ್ಮ ವೈಭವದಿಂದ ಆತ್ಮ ಮರುಕದ ಕಡೆಗೆ

ಸಾಗುತ್ತವೆ'. ಅಲ್ಲಿ ಕಂಡುಬರುವ ಭಾವಗಳೆಂದರೆ ಕೋಪ, ಸ್ವಮರುಕ, ಆತ್ಮನಿ-ರೀಕ್ಷೆ, ಅಭಿಮಾನದ ಮತ್ತು ಅವಮಾನದ ಬಗ್ಗೆ ಭಯ. ಈ ಎಲ್ಲಾ ಅಂಶಗಳು ಏಜಾಕ್ಸ್‌ನಲ್ಲಿರುವುದು ಕಂಡು ಬರುತ್ತದೆ ಹಾಗೂ ಪ್ರಾಣಿಗಳನ್ನು ಹತ್ಯೆಗೆ ಈಡು ಮಾಡಿ ಆತ್ಮಹತ್ಯೆ ಮಾಡಿಕೊಂಡ ಪಾತ್ರಗಳನ್ನು ದುರಂತದ ಕಲ್ಪನೆಯಲ್ಲಿ ಚಿತ್ರಿಸುವುದು ಉತ್ಪ್ರೇಕ್ಷೆಯಲ್ಲ ಎಂಬ ಚಿಂತನೆಯನ್ನು ಈ ಪಾತ್ರ ಮೂಡಿಸುತ್ತದೆ.

ಶ್ರೀ ಅವರು ಅಶ್ವತ್ಥಾಮನ್ ನಾಟಕವನ್ನು ಏಜಾಕ್ಸ್ ನಾಟಕದ ಜೊತೆಯಲ್ಲಿ ಇಟ್ಟು ನೋಡಿರುವುದು ಆಧುನಿಕ ಸಂದರ್ಭದಲ್ಲಿ ಉತ್ತಮ ಪ್ರಯತ್ನವಾಗಿ ಕಂಡುಬರುತ್ತದೆ. ಎರಡೂ ನಾಟಕಗಳಲ್ಲಿ ಅಭಿಮಾನದಿಂದ ಅವಮಾನಕ್ಕೆ ಪಾತ್ರಗಳ ವ್ಯಕ್ತಿತ್ವ ತಿರುಗುವುದನ್ನು ಕಾಣಬಹುದಾಗಿದೆ. ಏಜಾಕ್ಸ್ ವೀರಯುಗದ ಮೌಲ್ಯಗಳ ಪ್ರತಿನಿಧಿ ಹಾಗೂ ಬಲಿ. ಅದೇ ರೀತಿ ಅಶ್ವತ್ಥಾಮನ್ ಸ್ವಾಮಿ ನಿಷ್ಠೆಯ ಪ್ರತಿನಿಧಿ ಹಾಗೂ ಭವ್ಯ ಪಾತ್ರ. ಎರಡೂ ಪಾತ್ರಗಳ ಮೇಲಿರುವ ಒತ್ತಡಗಳಲ್ಲಿಯೂ ಭಿನ್ನತೆ ಇದೆ. ಅಶ್ವತ್ಥಾಮನ್‌ನ ಮೇಲಿರುವ ಒತ್ತಡಗಳು ಸ್ವ ಒತ್ತಡಗಳಲ್ಲ. ಆದರೆ ಏಜಾಕ್ಸ್‌ಗೆ ವೈಯಕ್ತಿಕ ಒತ್ತಡಗಳು ಕಂಡುಬರುತ್ತವೆ.

ಅಶ್ವತ್ಥಾಮನ ಪಾತ್ರ ಚಿತ್ರಣದಲ್ಲಿ ಸ್ವಮರುಕ, ಅವಮಾನ, ಪತನ, ಏಕಾಂಗಿ-ತನ ಮತ್ತು ಈವರೆಗಿನ ಅವನ ವ್ಯಕ್ತಿತ್ವವನ್ನು ಬಳಸಲಾಗಿದೆ. ವ್ಯಕ್ತಿತ್ವದ ಘರ್ಷಣೆ ಇಲ್ಲಿ ದಿಗ್ಭ್ರಮೆಯನ್ನು ಮೂಡಿಸುವ ಸನ್ನಿವೇಶವಾಗಿದೆ. ಈ ಎರಡೂ ನಾಟಕಗಳಲ್ಲಿ ಧೀರಜೀವನ ಧೀರಮರಣವಾಗಿ ಬದುಕೆ ಸಂಸ್ಕೃತಿ ಎಂಬಂತೆ ಪಾತ್ರಗಳ ಆತ್ಮ ನಿರೀಕ್ಷೆಯ ಕ್ರಮ ಅವುಗಳ ಪ್ರಮುಖ ಅಂಶವಾಗಿ ಕಂಡು ಬರುತ್ತದೆ. ಏಜಾಕ್ಸ್ ವೀರನಾದರೂ ತನ್ನ ಬಗೆಗಿನ ಸತ್ಯವನ್ನು ಅರಿಯುವುದರಲ್ಲಿ ವಿಫಲನಾಗುತ್ತಾನೆ. ಆದ್ದರಿಂದ ಅವನು ಆತ್ಮಹತ್ಯೆಯ ತೀರ್ಮಾನವನ್ನು ಅನಿವಾರ್ಯವೆಂದು ಭಾವಿಸಿ, ಅವನ ಜೀವನ ದುರಂತವಾಗುತ್ತದೆ. ಸಾವಿನೆಡೆಗೆ ಅಶ್ವತ್ಥಾಮನ್ ಸಿದ್ದನಾಗಿರುವ ಸಂದರ್ಭದಲ್ಲಿ ಕಡೆಯ ಭಾವನೆಗಳು ಸಂಕಟ, ವಿಪತ್ತು, ಪತನ. ಸಾವಿನೊಂದಿಗೆ ಏಜಾಕ್ಸ್ ಎಂಬ ತಪ್ಪು ಬದುಕು ವಿಶ್ರಾಂತಿಯನ್ನು ಪಡೆಯುತ್ತದೆ. ಆದರೆ ಅಶ್ವತ್ಥಾಮನದು ಚಿರಂಜೀವಿಯ ಮರಣವಾಗಿದೆ. ಈ ಮೂಲಕ ಅಶ್ವತ್ಥಾಮನ್ ನಾಟಕವು ಪರಂಪರಾಗತ ನಂಬಿಕೆಗಳನ್ನು ಹಲವು ವಿಧದಲ್ಲಿ ಮೀರಿ ಆಧುನಿಕ ಎನಿಸಿಕೊಂಡಿದೆ.

ಎರಡೂ ನಾಟಕಗಳಲ್ಲಿ, ಎರಡು ದುರಂತ ನಾಯಕ ಪಾತ್ರಗಳು ಮಗುವಿನೊಂದಿಗೆ ಮಾತನಾಡುವ ದೃಶ್ಯದಿಂದ. ಯೋಧನೊಬ್ಬ ಮಗುವಾಗಲು ಬಯಸುತ್ತಾನೆ ಎಂಬ ಮಾತನ್ನು ಸಂವಾದಿಗೊಳಿಸಿವೆ. ಅಶ್ವತ್ಥಾಮನ್‌ನ ದುರಂತದ

ಎಳೆ, ಅಶ್ವತ್ಥಾಮನ್ ಮತ್ತು ಏಜಾಕ್ಸ್ ಪಾತ್ರಗಳ ವ್ಯಕ್ತಿತ್ವದ ಆಳ, ಭಾರ್ಗವಿ ಮತ್ತು ಟೆಕ್ಮೆಸ್ಸಾರ ಭಯ, ದುಃಖ, ಸಂತೈಸುವ ರೀತಿ ಸ್ವಕೇಂದ್ರಿತವಾಗಿದೆ. ಅಲ್ಲದೆ ಮಗುವಿನ ಜೊತೆಗಿನ ಮುಕ್ತತೆಯಿಂದ ಇದು ಅನುಭಾವದ ಮಟ್ಟಕ್ಕೆ ಸಾಗುತ್ತದೆ.

**ಗ್ರಂಥಋಣ:**


1. ಕೆ. ಮರುಳಸಿದ್ದಪ್ಪ, ಆಧುನಿಕ ಕನ್ನಡ ನಾಟಕಗಳು (1993), ಲಿಪಿ ಪ್ರಕಾಶನ, ಬೆಂಗಳೂರು.
2. ಬಿ. ಎಂ. ಶ್ರೀಕಂಠಯ್ಯ, ಅಶ್ವತ್ಥಾಮನ್ (1996), ಗೀತಾ ಬುಕ್ ಹೌಸ್, ಮೈಸೂರು.
3. ಕೆ. ಸಿ. ಶಿವಾರೆಡ್ಡಿ (ಸಂ), ತೌಲನಿಕ ಸಾಹಿತ್ಯ (2008), ಅಧ್ಯಯನ ಮಂಡಲ.
4. ಎಸ್. ವಿ. ರಂಗಣ್ಣ, ಪಾಶ್ಚಾತ್ಯ ಗಂಭೀರ ನಾಟಕಗಳು (1999).
5. ಡಾ. ಎಚ್. ತಿಪ್ಪೇರುದ್ರಸ್ವಾಮಿ, ತೌಲನಿಕ ಕಾವ್ಯ ಮೀಮಾಂಸೆ (1985), ಡಿ.ವಿ.ಕೆ. ಮೂರ್ತಿ, ಮೈಸೂರು.